**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 08-12-2023.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್ ಜಿ ಜೆ ವಕೀಲರಿಂದಃ**

1. ನಾನು 9 ನೇ ತರಗತಿಯವರೆಗೆ ಓದಿದ್ದೇನೆ. ಪ್ರತಿವಾದಿ ನಂ.24 ನನ್ನ ತಾಯಿ. ಪ್ರತಿವಾದಿ ನಂ.25 ನನ್ನ ಅಣ್ಣ ಹಾಗೂ ಪ್ರತಿವಾದಿ ನಂ.26 ನನ್ನ ತಂದೆ. ಪ್ರತಿವಾದಿ ನಂ.24 ರಿಂದ 26 ಮತ್ತು ನೀವು ಒಟ್ಟಾಗಿ ವಾಸ ಇದ್ದಿರಾ ಎಂದರೆ ಸಾಕ್ಷಿಯು 2010 ರ ವರೆಗೆ ಒಟ್ಟಾಗಿ ವಾಸ ಇದ್ದೆವು ಎಂದು ಹೇಳುತ್ತಾರೆ. ನಾನು ಮನೆ ನಂ.688 ರಲ್ಲಿ ವಾಸ ಇದ್ದೇನೆ. ನನ್ನ ಸಹೋದರ ಪ್ರತಿವಾದಿ ನಂ.25 ಸಹ ಅದೇ ಮನೆಯಲ್ಲಿ ವಾಸ ಇದ್ದಾರೆ. ನನ್ನ ತಂದೆ ತಾಯಿ ಸಹ ಅದೇ ಮನೆಯಲ್ಲಿ ವಾಸ ಇರುತ್ತಾರೆ. ನಾನು ನನ್ನ ತಂದೆ ತಾಯಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ. ನನ್ನ ತಂದೆ ತಾಯಿಗೆ ವಯಸ್ಸು ಆಗಿದ್ದು ಅವರು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. ನಾನು ನನ್ನ ತಂದೆ ತಾಯಿ ವಯಸ್ಸಾಗಿದ್ದು ಅವರಿಗೆ ಆರೋಗ್ಯದ ಸಮಸ್ಯಗಳು ಇರುವುದರಿಂದ ಸಾಕ್ಷಿ ನುಡಿಯಲು ಬರಲು ಕಷ್ಟ ಇದೆ ಎಂದು ತೋರಿಸಲು ವೈದ್ಯಕೀಯ ದಾಖಲೆ ಹಾಜರು ಮಾಡಿಲ್ಲ. ನನ್ನ ಸಹೋದರ ಪ್ರತಿವಾದಿ ನಂ.25 ರವರು ಈ ಮೊದಲು ಸಾಕ್ಷಿಯನ್ನು ನುಡಿದಿದ್ದಾರೆ ಎಂದರೆ ನಿಜ. ಅವರು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತನ್ನ ಪರವಾಗಿ ಹಾಗೂ ಪ್ರತಿವಾದಿ ನಂ.24 ಮತ್ತು 26 ರ ಪರವಾಗಿ ಸಾಕ್ಷಿ ನುಡಿಯುತ್ತಿದ್ದಾರೆ ಎಂದು ಹೇಳಿದ್ದಾರೆ ಎಂದರೆ ನಿಜ. ನನ್ನ ಸಹೋದರ ಪ್ರತಿವಾದಿ ನಂ.25 ರವರ ಪರವಾಗಿ ನಾನು ಸಾಕ್ಷಿ ನುಡಿಯುತ್ತಿಲ್ಲ. ನನ್ನ ತಂದೆ ತಾಯಿ ಸಾಕ್ಷಿ ನುಡಿಯಲು ಅವರಿಗೆ ಆರೋಗ್ಯದ ಸಮಸ್ಯ ಇದೆ

ಆದ್ದರಿಂದ ಅವರು ಸಾಕ್ಷಿ ಕೊಡಲು ಸಾಧ್ಯವಾಗುತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯಿುತ್ತಿದೆನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಆರೋಗ್ಯವಂತರಾಗಿದ್ದು ಅವರು ಸಾಕ್ಷಿ ಕೊಡಲು ಬರಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ -ತಾಯಿಗೆ ಆರೋಗ್ಯ ಸರಿ ಇಲ್ಲ ಅದರ ದಾಖಲೆಗಳನ್ನು ನಾನು ಹಾಜರು ಮಾಡುತ್ತೇನೆ.

2. ಈ ದಾವೆಯಲ್ಲಿ ಆಸ್ತಿ ನಂ.121/2 ಎ, ವಿಸ್ತೀರ್ಣ 5 ಎಕರೆ 27 ಗುಂಟೆ ಕುರಿತು ಈ ದಾವೆ ಇರುವ ಬಗ್ಗೆ ಗೊತ್ತು. ಆಠ ಎಸ್ ನಂ. 121/6 ಮತ್ತು 121/7 ಆಸ್ತಿಗಳನ್ನು ಬಿಟ್ಟು ಬೇರೆ ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ತಕರಾರು ಇಲ್ಲ. ವಾದಿ ಗುರವ ಕುಟುಂಬ ಹಾಗೂ ನಮ್ಮ ಕುಟುಂಬದ ನಡುವೆ ಸಂಬಂಧ ಇದೆ ಅವರು ನಮಗೆ ಬಾಹುಬಂಧುಗಳು ಆಗಬೇಕು. ನಮ್ಮ ಕುಟುಂಬ ಹಾಗೂ ವಾದಿಗಳ ಕುಟುಂಬ ಬೇರೆ ಬೇರೆ ಅಂದರೆ ನಿಜ. ನಮ್ಮ ಕುಟುಂಬದ ಆಸ್ತಿಗಳ ವ್ಯವಹಾರ ನಾವು ನೋಡಿಕೊಳ್ಳುತ್ತೇವೆ ವಾದಿಯರ ಕುಟುಂಬದ ಆಸ್ತಿಗಳ ವ್ಯವಹಾರಗಳನ್ನು ಅವರು ನೋಡಿಕೊಳ್ಳುತ್ತಾರೆ. ಸರ್ವೆ ನಂ.121/2 ಒಟ್ಟು ವಿಸ್ತೀರ್ಣ 9 ಎಕರೆ 27 ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ 4 ಎಕರೆ ಮಾರಾಟವಾಗಿದೆ 5 ಎಕರೆ 27 ಗುಂಟೆ ಇತ್ತು ಎಂದು ಹೇಳುತ್ತಾರೆ. ನಿಪಿ. 16 ರಂತೆ ಸರ್ವೆ ನಂ.121/2 ಒಟ್ಟು ವಿಸ್ತೀರ್ಣ 9 ಎಕರೆ 27 ಗುಂಟೆ ಇರುತ್ತದೆ ಎಂದರೆ ನಿಜ. ಸದರಿ ಜಮೀನು ಫಲವತ್ತತೆಯಿಂದ ಕೂಡಿರುವ ಜಮೀನು ಎಂದರೆ ಸಾಕ್ಷಿಯು ಕೇವಲ ಭತ್ತ ಬೆಳೆ ಮಾತ್ರ ಬೆಳೆಯಲಾಗುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ.121/2 ಒಟ್ಟು ವಿಸ್ತೀರ್ಣ 9 ಎಕರೆ 27 ಗುಂಟೆ ಎರಡು ಭಾಗಗಳು ಆಗಿವೆ

ಅವುಗಳು ಸರ್ವೆ ನಂ.121/6 ಮತ್ತು 121/7 ಎಂದರೆ ನಿಜ. ಸದರಿ ಸರ್ವೆ ನಂ.121/2 ಇನ್ನೊಂದು ಭಾಗ ಪೊಟ ಹಿಸ್ಸೆ ಸಹ ಆಗಿದೆ ಎಂದರೆ ನಿಜ. ಸರ್ವೆ ನಂ.121/2 ಮೊದಲು ಡಾಖಲು ಜಾನು ಗುರುವ ರವರ ಹೆಸರಿನಲ್ಲಿ ಇತ್ತು ಎಂದರೆ ನಿಜ. ಡಾಖಲು ಗುರವ ರವರಿಗೆ ನಾರಾಯಣ ಮತ್ತು ತೋಪಣ್ಣ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಡಾಖಲು ಗುರವ ರವರು 1933 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣರವರಿಗೆ ರುಕ್ಮಿನಿಬಾಯಿ ಹೆಂಡತಿ ವಾದಿ ನಂ.1 ರಿಂದ 3 ಮತ್ತು ಪ್ರತಿವಾದಿ ನಂ.1 ರಿಂದ 3 ಮಕ್ಕಳು ಎಂದರೆ ನಿಜ. ತೋಪಣ್ಣರವರಿಗೆ ಹೊನುವಳ್ಳಿ ಮತ್ತು ಅಂಬಾಬಾಯಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ತೋಪಣ್ಣರವರ ವಾರಸುದಾರರು ಯಾರು ಇರುವುದಿಲ್ಲ, ಎಲ್ಲರು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಾಖಲು ಗುರವ ತೀರಿಕೊಂಡ ನಂತರ ಅವರ ಮಗ ನಾರಾಯಣ ರವರ ಹೆಸರಿನಲ್ಲಿ ವಾರಸು ದಾಖಲು ಆಗಿತ್ತು ಎಂದರೆ ನಿಜ.

3. ನಾರಾಯಣ ರವರಿಗೆ 1961 ರಲ್ಲಿ ರೈತಾಪಿನಾತೆಯಿಂದ ಸರ್ವೆ ನಂ.121/2 ಜಮೀನು ಮರುಮಂಜೂರು ಆಗಿತ್ತು ಎಂದರೆ ನಿಜ. ನಂತರ ನಾರಾಯಣ ರವರ ಹೆಸರಿನಲ್ಲಿ ಸದರಿ ಆಸ್ತಿಯ ದಾಖಲೆಗಳು ದಾಖಲು ಆದವು ಎಂದರೆ ನಿಜ. ನಾರಾಯಣ ರವರು ತಮ್ಮ ಜೀವಂತ ಕಾಲದಲ್ಲಿ ತನಗೆ ವಯಸ್ಸು ಆಗಿದ್ದು ಆಸ್ತಿಯ ವ್ಯವಹಾರವನ್ನು ನೋಡಲು ಆಗುವುದಿಲ್ಲ ಎಂದು ತನ್ನ ಮಕ್ಕಳಾದ ಪ್ರತಿವಾದಿ ನಂ.1 ಡಾಖಲು ಮತ್ತು ವಾದಿ ನಂ.1 ಜೋತಿಭಾ ರವರ ಹೆಸರಿನಲ್ಲಿ ಸದರಿ ಆಸ್ತಿಯನ್ನು ವರದಿ ಕೊಟ್ಟು ಅವರ ಹೆಸರುಗಳಲ್ಲಿ ಮಾಡಿಸಿದ್ದರು ಎಂದರೆ

ಸಾಕ್ಷಿಯು ವಾರಸಾನಾತೆಯಿಂದ ಮಾಡಿಸಿದ್ದರು ಎಂದು ಹೇಳುತ್ತಾರೆ. ಎಮ್.ಇ ನಂ.1874 ರಂತೆ ಡೈರಿ ಆಗಿದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ವಾದಿನಂ.1 ರವರು ಮೈನರ ಆಗಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿಗೆ ಎಮ್.ಇ ನಂ.1874 ತೋರಿಸಿ ಅದರಲ್ಲಿರುವ ಆಸ್ತಿಗಳ ಪೈಕಿ ತಿಳಿಸಲಾಗಿ ಸಾಕ್ಷಿಯು ಎಲ್ಲಾ ಆಸ್ತಿಗಳು ಮಾರಾಟ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ಪೂರ್ವಾಹ್ನ ಅವಧಿ ಮುಗಿದಿದ್ದರಿಂದ ಮುಂದಿನ ಪಾಟೀ ಸವಾಲು ಮಧ್ಯಾಹ್ನದ ಅವಧಿಗೆ ಮುಂದುಡಲಾಯಿತು)**

**ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್ ಜಿ ಜೆ ವಕೀಲರಿಂದಃ**

4. ನಾನು ಆರ್. ಎಸ್ ನಂ.121/2 ಜಮೀನಿನ ಉತಾರಗಳನ್ನು ನೋಡಿದ್ದೆನೆ ಆದರೆ ಡೈರಿ ನೋಡಿಲ್ಲ. ಚಾಲ್ತಿ ಉತಾರ ಅಂದರೆ 2010 ರ ನಂತರದ ಉತಾರ ನೋಡಿದ್ದೆನೆ. 2010 ರ ಹಿಂದಿನ ಉತಾರಗಳನ್ನಾಗಲಿ ಡೈರಿಯಾಗಲಿ ನೋಡಲು ಪ್ರಯತ್ನ ಪಟ್ಟಿರುವುದಿಲ್ಲ. ನಿಪಿ.35 ರಲ್ಲಿ ದಾವೆಯ ಆಸ್ತಿಗಳೊಂದಿಗೆ ಆರ್ ಎಸ್ ನಂ.121/2 ಜಮೀನು ಸಹ ನಮೂದಿಸಲಾಗಿದೆ. ನಾರಾಯಣ ರವರು ತನ್ನ ಜೀವಂತಕಾಲದಲ್ಲಿ ತನ್ನ ಮಕ್ಕಳಿಗೆ ಯಾವುದೇ ನೊಂದಾಯಿತ ದಾಖಲೆ ಆಗಲಿ, ವಿಲ್ ದಾಖಲೆ, ಬಕ್ಷಿಸ ಪತ್ರ ಬರೆದುಕೊಟ್ಟಿರಲಿಲ್ಲ. ನಾರಾಯಣರವರ ಜೀವಂತಕಾಲದಲ್ಲಿ ಪಾಲುವಾಟ್ನಿ ಆಗಿದೆಯೇ ಎಂದರೆ ಸಾಕ್ಷಿಯು ಅವರ ಜೀವಂತ ಕಾಲದಲ್ಲಿ ಆಗಿರಲಿಲ್ಲ ಆದರೆ ಅವರ ಮಕ್ಕಳು ತಮ್ಮ ತಮ್ಮ ಹಿಸ್ಸೆಯ ಆಸ್ತಿಗಳನ್ನು ಈಗಾಲಗೆ ಮಾರಾಟ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ನಾರಾಯಣರವರ ಎಲ್ಲಾ ಮಕ್ಕಳು ಅವರ ಎಲ್ಲ ಆಸ್ತಿಗೆ ವಾರಸುದಾರರು ಆಗುತ್ತಾರೆ ಎಂದರೆ ನಿಜ. ಆರ್ ಎಸ್ ನಂ.121/2 ಜಮೀನು ಅವರ ಪೂರ್ವಾಜಿತ ಆಸ್ತಿ ಎಂದರೆ ಸಾಕ್ಷಿಯು ತಂದೆಯಿಂದ ಅಂದರೆ ನಾರಾಯಣ ರವರಿಂದ ಬಂದ ಆಸ್ತಿ ಎಂದು ಹೇಳುತ್ತಾರೆ. ನಾರಾಯಣ ತೀರಿಕೊಂಡ ನಂತರ ಅವರಿಗೆ ವಾದಿ ನಂ.1 ರಿಂದ 3 ಹಾಗೂ ಪ್ರತಿವಾದಿ ನಂ.1 ರಿಂದ 3 ರವರು ವಾರಸುದಾರರು ಆಗಿದ್ದರು ಎಂದರೆ ನಿಜ. ನಾರಾಯಣ ತೀರಿಕೊಂಡ ನಂತರ ಅವರ ಮಕ್ಕಳ ನಡುವೆ ಕೊರ್ಟ್ ಮೂಲಕ ಅಥವಾ ನೊಂದಾಯಿತ ವಾಟ್ನಿ ಆಗಿದೆಯೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಮೌಖಿಕವಾಟ್ನಿ ಆಗಿದೆ ಎಂದು ಹೇಳುತ್ತಾರೆ. ಮೌಖಿಕವಾಟ್ನಿ ಆದ ಬಗ್ಗೆ ಪ್ರತಿವಾದ ಪತ್ರದಲ್ಲಿ ಆಗಲಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆಗಲಿ ಬರೆಸಿಲ್ಲ ಸಾಕ್ಷಿಯು ಮೌಖಿಕವಾಗಿ ಪಾಲುವಾಟ್ನಿ ಆಗಿದೆ ಎಂದು ಪುನಃ ಹೇಳುತ್ತಾರೆ. ಯಾವ ವರ್ಷದಲ್ಲಿ ಮೌಖಿಕ ಪಾಲುವಾಟ್ನಿ ಆಗಿದೆ ಎಂದು ಹೇಳಲು ಬರುವುದಿಲ್ಲ. ಮೌಖಿಕ ಪಾಲು ವಾಟ್ನಿ ಆಗಿದೆ ಎಂದು ಹೇಳುತ್ತಿರುವ ಪಾಲುವಾಟ್ನಿಯಲ್ಲಿ ಯಾರಿಗೆ ಯಾವ ಆಸ್ತಿ ಹಿಸ್ಸೆಗೆ ಬಂದಿದೆ ಎಂದರೆ ಸಾಕ್ಷಿಯು ಆರ್ ಎಸ್ ನಂ.121/2 ಜಮೀನು ಅವರ ಬಳಿ ಇರಲಿಲ್ಲ ಎಲ್ಲರೂ ಮಾರಿಕೊಂಡಿದ್ದಾರೆ ಬೇರೆ ಆಸ್ತಿಗಳಲ್ಲಿ ಪಾಲುವಾಟ್ನಿ ಆಗಿದೆ ಎಂದು ಹೇಳುತ್ತಾರೆ. ಪಾಲುವಾಟ್ನಿ ಪ್ರಕಾರ ಉತಾರಗಳು ಆಗಿವೆ ಎಂದರೆ ಸಾಕ್ಷಿಯು ಅದು ಅವರು ಮಾಡಿಕೊಂಡಿದ್ದಾರೆ ಅಥವಾ ಇಲ್ಲ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರ್ ಎಸ್ ನಂ.121/2 ಜಮೀನನ್ನು ಮೊದಲ ಬಾರಿಗೆ ಯಾವ ವರ್ಷದಲ್ಲಿ ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿಯ ಅದು ಹೇಳಲು ಬರುವುದಿಲ್ಲ ಆದರೆ

ನಮಗೆ ಅದೆ ಜಮೀನು 15 ಗುಂಟೆ ಜಮೀನು 23.03.1987 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. 1987 ರಲ್ಲಿ ಆರ್ ಎಸ್ ನಂ.121/2 ಜಮೀನು ವಾದಿ ನಂ.1, ಪ್ರತಿವಾದಿ ನಂ.1 ಹಾಗೂ ಅವರ ತಾಯಿ ಹೆಸರಿನಲ್ಲಿ ಇತ್ತು. 1987 ರಲ್ಲಿ ಸದರಿ ರವರಿಗೆ ನಾರಾಯಣ ರವರಿಂದ ಸದರಿ ಜಮೀನು ಬಂದಿತ್ತು. ಆ ಪ್ರಕಾರ ಸದರಿರವರ ಹೆಸರಿನಲ್ಲಿ ಡೈರಿ ಆಗಿತ್ತಾ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ಹೇಳುತ್ತಾರೆ.

5. ವಾದಿ ಕುಟುಂಬಕ್ಕೆ ಒಟ್ಟು 26 ಎಕರೆ ಜಮೀನು ಇತ್ತು ಎಂದರೆ ನಿಜ. ಸಾಕ್ಷಿಯು ಅವರ ತಂದೆ ನಾರಾಯಣ ಜೀವಂತ ಕಾಲದಲ್ಲಿ ಇತ್ತು. ಈಗ ಎಷ್ಟು ಜಮೀನು ವಾದಿ ಕುಟುಂಬಕ್ಕೆ ಇದೆ ಎಂದು ಹೇಳಲು ಬರುವುದಿಲ್ಲ. 1987 ರಲ್ಲಿ ಆರ್ ಎಸ್ ನಂ.121/2 ಜಮೀನು ಮಾರಾಟಕ್ಕೆ ಇದೆ ಎಂದು ದಿನಪತ್ರಿಕೆಯಲ್ಲಿ ಜಾಹಿರಾತು ಹೊರಡಿಸಲಾಗಿತ್ತಾ ಎಂದರೆ ಸಾಕ್ಷಿಯು ಇಲ್ಲ, ವಾದಿ ನಂ.1, ಪ್ರತಿವಾದಿ ನಂ.1 ಮತ್ತು ಅವರ ತಾಯಿ ರುಕ್ಮಿನಿಬಾಯಿ ಹಾಗೂ ಅವರ ಮಾಮಾ ಶಂಕರ ಗಾಡಿ ನಮ್ಮ ಮನೆಗೆ ಬಂದು ಸದರಿ ಜಮೀನು ಮಾರಾಟಕ್ಕೆ ಇದೆ ಎಂದು ತಿಳಿಸಿದ್ದರು. 1987 ರಲ್ಲಿ ಆರ್ ಎಸ್ ನಂ.121/2 ಜಮೀನಿನ ವ್ಯವಹಾರ ಪ್ರತಿವಾದಿ ನಂ.1- ಡಾಖಲು ಮತ್ತು ರುಕ್ಮಿನಿಬಾಯಿ ರವರು ನಮ್ಮ ತಾಯಿ ರವರೊಂದಿಗೆ ಮಾಡಿದ್ದರು. ಸದರಿ ಜಮೀನು 6000 ಗಳಿಗೆ ಮಾರಾಟ ಮಾಡಲು ಮಾತುಕತೆ ಆಗಿತ್ತು. ನಮ್ಮ ತಾಯಿ ಸದರಿ ಆಸ್ತಿ ಖರೀದಿ ಮಾಡುವ ಮುಂಚೆ ದಿನಪತ್ರಿಕೆಯಲ್ಲಿ ಜಾಹಿರಾತು ಹೊರಡಿಸಿರಲಿಲ್ಲ. ಸದರಿ ವ್ಯವಹಾರದ ಕುರಿತು ಖರೀದಿ ಕರಾರು ಪತ್ರ ಬರವಣಿಗೆ ಆಗಿತ್ತು. ಬಾಂಡ ಕಾಗದದ ಮೇಲೆ

ಬರೆದುಕೊಟ್ಟಿದ್ದರು ನಂತರ ನೊಂದಣಿ ಮಾಡಿಕೊಡುತ್ತೇನೆ ಎಂದು ಹೇಳಿದ್ದರು. ಖರೀದಿ ಕರಾರ ಪತ್ರ ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎಂದರೆ, ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ ಹಾಜರು ಮಾಡಿರಬಹುದು ಹೇಳುತ್ತಾರೆ. 1987 ರಲ್ಲಿ ಆಗಿದೆ ಎನ್ನಲಾದ ಖರೀದಿ ಕರಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಹಾಜರು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸಾಕ್ಷಿಯು ತಾನು ಹಾಜರು ಪಡಿಸಿರುವ ಎಲ್ಲಾ ದಾಖಲೆಗಳನ್ನು ನೋಡಿ ಅದರಲ್ಲಿ ಇಲ್ಲ ಎಂದು ಹೇಳುತ್ತಾರೆ. ಸದರಿ ಖರೀದಿ ಕರಾರು ಪತ್ರ ಹಾಜರುವ ಮಾಡಲು ನನಗೆ ಅಡಚಣೆ ಇಲ್ಲ ಹಾಜರು ಮಾಡುತ್ತೇನೆ ಎಂದು ಹೇಳುತ್ತಾರೆ. ಸದರಿ ವ್ಯವಹಾರದ ರೂ.6000/- ನಗದು ರೂಪದಲ್ಲಿ ದಿನಾಂಕಃ 23.03.1987 ರಲ್ಲಿ ಒಂದೇ ಬಾರಿಗೆ ಕೊಡಲಾಗಿದೆ. ಖರೀದಿ ಕರಾರ ಪತ್ರಕ್ಕೆ ಪ್ರತಿವಾದಿ ನಂ.1 ಹಾಗೂ ಅವರ ತಾಯಿ ಸಹಿ ಮಾಡಿದ್ದರು. ಆ ಸಮಯದಲ್ಲಿ ವಾದಿ ನಂ.1 ರವರು ಮೈನರ ಇದ್ದರು. ಖರೀದಿ ಕರಾರ ಪತ್ರಕ್ಕೆ ನಾರಾಯಣ ರವರ ಇತರ ವಾರಸುದಾರರಾದ ಪ್ರತಿವಾದಿ ನಂ.2, 3 ಹಾಗೂ ವಾದಿ ನಂ.2 ಮತ್ತು 3 ರವರು ಸಹಿ ಮಾಡಿರಲಿಲ್ಲ. ಸಾಕ್ಷಿಯು ಅವರಿಗೆ ಮಾಹಿತಿ ಇತ್ತು ಎಂದು ಹೇಳುತ್ತಾರೆ. ಸದರಿ ಖರೀದಿ ಕರಾರ ಪತ್ರ ನೊಂದಣಿ ಆಗಿದೆಯೇ ಎಂದರೆ ಸಾಕ್ಷಿಯು ಅವರು ಮಾಡಿಕೊಟ್ಟಿಲ್ಲ ಆದರೆ ಹೆಸರು ಹಚ್ಚಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. 1987 ರಲ್ಲಿ ಆಗಿದೆ ಎನ್ನಲಾದ ಖರೀದಿ ಕರಾರು ಪತ್ರದಂತೆ ನೊಂದಣಿ ಖರೀದಿ ಪತ್ರ ಮಾಡಿಸಿಕೊಂಡಿದ್ದಿರಿ ಎಂದರೆ ಸಾಕ್ಷಿಯು ಅವರು ನಮ್ಮ ಹೆಸರನ್ನು ದಾಖಲು ಮಾಡಿಕೊಟ್ಟಿದ್ದರು ಆದ್ದರಿಂದ ಖರೀದಿ ಪತ್ರ ಬರೆಸಿಕೊಂಡಿಲ್ಲ ಎಂದು

ಹೇಳುತ್ತಾರೆ. ಆರ್ ಎಸ್ ನಂ.121/2 ರಲ್ಲಿ 15 ಗುಂಟೆಗೆ ಇಲ್ಲಿಯವರೆಗೆ ಯಾವುದೇ ಖರೀದಿ ಪತ್ರ ನೊಂದಣಿ ಆಗಿಲ್ಲ ಎಂದರೆ ಸಾಕ್ಷಿಯು ಸದರಿ 15 ಗುಂಟೆ ಜಮೀನು ನಮ್ಮ ಹೆಸರಿನಲ್ಲಿ ಆಗಿತ್ತು ಆದ್ದರಿಂದ ನೊಂದಣಿ ಖರೀದಿ ಪತ್ರ ಮಾಡಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು 15 ಗುಂಟೆ ಜಮೀನಿಗೆ ನನ್ನ ತಾಯಿ ಹೆಸರಿನಲ್ಲಿ ಆಗಿದೆ ಎಂದು ಹೇಳಲಾದ ಡೈರಿಯನ್ನು ನಾನು ನೋಡಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಸದರಿ 15 ಗುಂಟೆ ಜಮೀನು ವರದಿಯ ಆಧಾರದ ಮೇರೆಗೆ ದಾಖಲು ಆಗಿತ್ತು. ಸದರಿ ವರದಿಯನ್ನು ನಾನು ನೋಡಿಲ್ಲ, ಸದರಿ ವರದಿಯಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ವರದಿ ಕೊಟ್ಟ ನಂತರ ಸದರಿ ವರದಿಯ ಕುರಿತು ನಾರಾಯಣ ರವರ ಎಲ್ಲಾ ವಾರಸುದಾರರರಿಗೆ ನೋಟಿಸು ಕೊಡಲಾಗಿತ್ತಾ ಎಂದರೆ ಸಾಕ್ಷಿಯು ಸದರಿ ವರದಿ ನಾವು ಕೊಟ್ಟಿರಲಿಲ್ಲ ಡಾಖಲು ರವರು ವರದಿ ಕೊಟ್ಟು ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ದಿನಾಂಕಃ 23.03.1987 ರಲ್ಲಿ ರೂ,6000/- ಕೊಟ್ಟು ಖರೀದಿ ಕರಾರ ಪತ್ರ ಮಾಡಿಕೊಡಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ. ಅದರಂತೆ ಗುರವ ಕುಟುಂಬದವರು ಎಂದಿಗೂ ನನ್ನ ತಾಯಿಯ ಹೆಸರಿನಲ್ಲಿ 15 ಗುಂಟೆ ಜಮೀನಿಗೆ ದಾಖಲು ಮಾಡಲು ವರದಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯ ಹೆಸರಿನಲ್ಲಿ ಬೇಕಾಯ್ದಿಶಿರ 15 ಗುಂಟೆ ಜಮೀನು ದಾಖಲು ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಖರೀದಿ ಕರಾರ ಪತ್ರ ನಮ್ಮ ತಾಯಿ ಹಾಗೂ ಗುರುವ ಕುಟುಂಬದ ಸದಸ್ಯರೊಂದಿಗೆ ಆಗಿರಲಿಲ್ಲ ಆದ್ದರಿಂದ ಖರೀದಿ ಪತ್ರ ನೊಂದಣಿ ಸಹ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಯು ಬಾಂಡ ಕಾಗದ ಮೇಲೆ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಿನಾಂಕಃ 23.03.1987 ರಲ್ಲಿ ಆಗಿದೆ ಎನ್ನಲಾದ ಖರೀದಿ ಕರಾರ ಪತ್ರದಂತೆ ನಿಮ್ಮ ತಾಯಿಯ ಹೆಸರಿನಲ್ಲಿ ನೊಂದಾಯಿತ ಖರೀದಿ ಪತ್ರ ಮಾಡಿಕೊಳ್ಳಲು ನಿಮಗೆ ಏನಾದರು ಅಡಚಣೆ ಇತ್ತಾ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ 15 ಗುಂಟೆ ಜಮೀನು ದಾಖಲು ಆಗಿತ್ತು ಆದ್ದರಿಂದ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ರೂ.6000/- ಕೊಟ್ಟ ಬಗ್ಗೆ ಪಾವತಿ ರಶೀದಿ ಇದೆಯಾ ಎಂದರೆ ಸಾಕ್ಷಿಯು ಅದರ ಬಗ್ಗೆ ಬಾಂಡ ಕಾಗದದಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ಮತ್ತು ಅವರ ತಾಯಿ ರೂ.6000/- ಗಳನ್ನು ಪಡೆದ ಬಗ್ಗೆ ಪಾವತಿ ರಶೀದಿ ಬರೆದುಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ. ದಿನಾಂಕಃ 23.03.1987 ರಲ್ಲಿ ಪ್ರತಿವಾದಿ ನಂ.1 ಹಾಗೂ ಅವರ ತಾಯಿ ರೂ.6000/- ಪಡೆದು 15 ಗುಂಟೆ ಆಸ್ತಿಯ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿದ್ದಾರೆ ಎಂದು ಬರೆದಿರುವ ವಿಚಾರ ನಿಜ ಇದೆ. ನೀವು ದಿನಾಂಕಃ 23.03.1987 ರಲ್ಲಿ ಖರೀದಿ ಕರಾರ ಪತ್ರ ಹಾಗೂ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆಯಿಸಿಕೊಂಡಿದ್ದಿರಾ ಎಂದರೆ ಸಾಕ್ಷಿಯು ಒಂದು ಬಾಂಡ ಕಾಗದ ಮೇಲೆ ಅವರು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಹಕ್ಕು ಬಿಟ್ಟು ಕೊಟ್ಟ ಪತ್ರ ನೊಂದಣಿ ಆಗಿದೆಯೇ ಎಂದರೆ ಸಾಕ್ಷಿಯು ಇಲ್ಲ ನಮ್ಮ ಹೆಸರಿನಲ್ಲಿ ಅವರು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

6. ನಿಡಿ.62 ಖರೀದಿ ಪತ್ರ ನಮ್ಮ ಹಾಗೂ ನನ್ನ ಸಹೋದರ -ವಿಜಯ ಪ್ರತಿವಾದಿ ನಂ.25 ರವರ ನಡುವೆ ಆಗಿದೆ. ನನ್ನ ತಾಯಿ ಜೀವಂತ ಇದ್ದಾರೆ. ನನ್ನ

ತಾಯಿ ಹಾಗೂ ನನ್ನ ನಡುವೆ ಸದರಿ 15 ಗುಂಟೆ ಜಮೀನಿನ ಕುರಿತು ವ್ಯವಹಾರ ಆಗಿದ್ದು ನನ್ನ ತಾಯಿ ನನಗೆ 15 ಗುಂಟೆ ಜಮೀನು ಕೊಟ್ಟಿದ್ದಾರೆ. ನನ್ನ ಹಾಗೂ ನನ್ನ ಸಹೋದರರ ನಡುವೆ ವಾಟ್ನಿ ಆಗಿದ್ದು ನನ್ನ ತಾಯಿ ನನ್ನ ಹಿಸ್ಸೆಗೆ 15 ಗುಂಟೆ ಜಮೀನು ಕೊಟ್ಟಿದ್ದಾರೆ. ವಾಟ್ನಿ ಕಾಗದ ಆಗಿರಲಿಲ್ಲ. ಮೌಖಿಕ ಪಾಲುವಾಟ್ನಿ ಆಗಿತ್ತು. ಸದರಿ 15 ಗುಂಟೆ ನನ್ನ ಹೆಸರಿಗೆ ಆದ ಬಗ್ಗೆ ಡೈರಿ ಆಗಿದೆ ಅಥವಾ ಇಲ್ಲ ನನಗೆ ಮಾಹಿತಿ ಇಲ್ಲ. ನನ್ನ ತಾಯಿ ನನಗೆ 15 ಗುಂಟೆ ಜಮೀನು 2010-11 ರಲ್ಲಿ ಕೊಟ್ಟಿದ್ದಾರೆ. 15 ಗುಂಟೆ ಜಮೀನು ನನ್ನ ತಾಯಿ ನನಗೆ ಪಾಲುವಾಟ್ನಿಯಲ್ಲಿ ಕೊಡಲು ಅವರಿಗೆ ಅವರು ಬಾಂಡ ಕಾಗದದ ಮೇಲೆ ಪಡೆದಿದ್ದ ದಾಖಲೆ ಬಿಟ್ಟು ಬೇರೆ ಯಾವುದೇ ದಾಖಲೆ ಇರಲಿಲ್ಲ. ನಿಡಿ.62 ರಲ್ಲಿ ವಾರಸಾನಾತೆಯಿಂದ 15 ಗುಂಟೆ ಜಮೀನು ನನಗೆ ಬಂದಿದೆ ಎಂದು ನಾನು ಬಾಂಡ ರೈಟರ ಕೇಳಿದಾಗ ಹೇಳಿದ್ದೆ ಆದ್ದರಿಂದ ಅದರಲ್ಲಿ ಬರೆದಿದ್ದಾರೆ. ನಿಡಿ.62 ಖರೀದಿ ಪತ್ರದಲ್ಲಿ ನಮ್ಮ ತಾಯಿಗೆ 15 ಗುಂಟೆ ಜಮೀನು ನೊಂದಾಯಿತ ಖರೀದಿ ಪತ್ರದಂತೆ ಬಂದಿದೆ ಎಂದು ಬರೆಸಿಲ್ಲ ಅದೇ ರೀತಿ ನನ್ನ ತಾಯಿ ನನಗೆ ಸದರಿ 15 ಗುಂಟೆ ಜಮೀನು ಪಾಲುವಾಟ್ನಿಯಲ್ಲಿ ಕೊಟ್ಟಿದ್ದಾರೆ ಎಂದು ಬರೆಸಿಲ್ಲ. ನಿಡಿ.62 ದಾಖಲೆ ಬರೆದುಕೊಡಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರ ಶಾಮಿಲಾಗಿ ನಿಡಿ.62 ಖರೀದಿ ಪತ್ರವನ್ನು ಖೊಟ್ಟಿಯಾಗಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ.62 ರಲ್ಲಿ ವಾದಿಯರ ಸಹಿಯಾಗಲಿ ಪ್ರತಿವಾದಿ ನಂ.1 ರಿಂದ 3 ರವರ ಸಹಿ ಇಲ್ಲ ಎಂದರೆ ನಿಜ. ಸದರಿ ನಿಡಿ.62 ರಂತೆ ಪ್ರತಿಫಲದ ಹಣವನ್ನು ಪ್ರತಿವಾದಿ ನಂ.1

ರಿಂದ 3 ಮತ್ತು ವಾದಿಯರಿಗೆ ಸೇರಿಲ್ಲ ಎಂದರೆ ನಿಜ. ಸಾಕ್ಷಿಯು ನಾನು ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಆರ್ ಎಸ್ ನಂ.121/2 ಜಮೀನಿನಲ್ಲಿ ನಾರಾಯಣ ರವರ ಮಕ್ಕಳ ನಡುವೆ ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಪಾಲುವಾಟ್ನಿ ಮಾಡಿಕೊಳ್ಳಲು ಸದರಿ ಆಸ್ತಿ ಅವರ ಬಳಿ ಇರಲಿಲ್ಲ ಎಂದು ಹೇಳುತ್ತಾರೆ.

7. ಆರ್ ಎಸ್ ನಂ.121/2 ಖರೀದಿ ಆಗಿದೆ ಎನ್ನಲಾದ ದಿನಾಂಕದ ಮೊದಲು ಅದರಲ್ಲಿ ವಾದಿ ಗುರವ ಕುಟುಂಬದಲ್ಲಿ ಪಾಲುವಾಟ್ನಿ ಆಗಿದೆ ಯೇ ಅಥವಾ ಇಲ್ಲ ಎಂದರೆ ಸಾಕ್ಷಿಯು ವಾದಿ ನಂ.1 ರವರು ಆ ಸಮಯದಲ್ಲಿ ಮೈನರ ಇದ್ದರು ಅವರ ಪಾಲನೆ ಪೋಷನೆಗಾಗಿ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದು ಹೇಳುತ್ತಾರೆ. ನನ್ನ ತಾಯಿಗೆ ಆಸ್ತಿ ಖರೀದಿ ಕೊಡಲಾಗಿದೆ ಎಂದು ಹೇಳುವಂತೆ ಸದರಿ ಖರೀದಿ ವ್ಯವಹಾರದ ಮುಂಚೆ ವಾದಿ ನಂ.1 ರವರ ತಾಯಿ ಮೈನರ ಆಸ್ತಿಯನ್ನು ಮಾರಾಟ ಮಾಡಲು ಆದೇಶವನ್ನು ಪಡೆದಿದ್ದರು ಅಥವಾ ಇಲ್ಲ ನನಗೆ ಗೊತ್ತಿಲ್ಲ. ವಾದಿಯರಿಗೆ ನಿಡಿ.62 ಖರೀದಿ ಪತ್ರದ ನಂತರ ಆದ ಡೈರಿಯ ನೋಟಿಸು ಕೊಟ್ಟಿರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಸದರಿ ಆಸ್ತಿಗೆ ಅವರು ಸಂಬಂಧ ಇಲ್ಲ ಆದ್ದರಿಂದ ನೋಟಿಸು ಕೊಡುವ ಪ್ರಮೇಯ ಇರಲಿಲ್ಲ ಎಂದು ಹೇಳುತ್ತಾರೆ.

8. ಸದರಿ 15 ಗುಂಟೆ ಜಮೀನು ಈಗ ಖಾಲಿ ಜಾಗ ಇದೆ ಎಂದರೆ ಸಾಕ್ಷಿಯು ಅದರಲ್ಲಿ ಬೆಳೆಯನ್ನು ಬೆಳೆಯುತ್ತಿದ್ದೆವೆ ಎಂದು ಹೇಳುತ್ತಾರೆ. ಸದರಿ 15 ಗುಂಟೆ ಜಮೀನಿನ ಕಬ್ಜೆಯನ್ನು 1987 ರಲ್ಲಿ ನಮ್ಮ ತಾಯಿಗೆ ಕೊಡಲಾಗಿದೆ. 1987 ರಿಂದ

ಸದರಿ 15 ಗುಂಟೆ ಜಮೀನಿನ ಸ್ವಾ ಧೀನ ನಮ್ಮ ಬಳಿ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 15 ಗುಂಟೆ ಜಮೀನಿನಲ್ಲಿ ವಾದಿ ಗುರವ ಕುಟುಂಬದಲ್ಲಿ ಪಾಲುವಾಟ್ನಿ ಆಗಿಲ್ಲ ಆದ್ದರಿಂದ ಅದು ಅವರ ಜಂಟಿ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

9. 1991 ರಲ್ಲಿ 2 ಗುಂಟೆ ಜಮೀನು ಮಾರಾಟಕ್ಕೆ ಇದೆ ಎಂದು ದಿನಪತ್ರಿಕೆಯಲ್ಲಿ ಜಾಹಿರಾತು ಹೊರಡಿಸಲಾಗಿತ್ತು ಅಥವಾ ಇಲ್ಲ ಎನ್ನುವ ಮಾಹಿತಿ ನನಗೆ ಇಲ್ಲ. ಸದರಿ 2 ಗುಂಟೆ ಜಮೀನಿನ ವ್ಯವಹಾರ ನಮ್ಮ ತಂದೆ ಹಾಗೂ ಪ್ರತಿವಾದಿ ನಂ.1 ಮತ್ತು ಅವರ ತಾಯಿ ರುಕ್ಮಿನಿಬಾಯಿ ರವರ ನಡುವೆ ಆಗಿದೆ. ಆ ಸಮಯದಲ್ಲಿ ವಾದಿ ನಂ.1 ಮೈನರ ಇದ್ದರು. ಸದರಿ 2 ಗುಂಟೆ ಜಮೀನು ರೂ.500 ಗಳಿಗೆ ಮಾರಾಟಕ್ಕೆ ವ್ಯವಹಾರ ಆಗಿತ್ತು. ಸದರಿ ಹಣ ನಗದು ರೂಪದಲ್ಲಿ ಕೊಡಲಾಗಿತ್ತು. ಸದರಿ ಖರೀದಿ ಪತ್ರ ನಿಡಿ.64 ಕ್ಕೆ ನಾರಾಯಣರವರ ಉಳಿಕೆ ವಾರಸುದಾರರ ಸಹಿ ಇಲ್ಲ. ವಾದಿ ನಂ.1 ರವರು ಮೈನರ ಆಗಿದ್ದು ಅವರ ಹಿಸ್ಸೆಯ ಆಸ್ತಿಯನ್ನು ಮಾರಾಟ ಮಾಡುವ ಮುಂಚೆ ಮಾರಾಟಕ್ಕಾಗಿ ಆದೇಶವನ್ನು ನ್ಯಾಯಾಲಯದಿಂದ ಪಡೆಯಲಾಗಿತ್ತಾ ಎಂದರೆ ಸಾಕ್ಷಿಯು ಅದರ ಮಾಹಿತಿ ನನಗೆ ಇಲ್ಲ ಎಂದು ಹೇಳುತ್ತಾರೆ. 500 ರೂಪಾಯಿಗಳನ್ನು ಕೊಡಲಾಗಿದೆ ಎಂದು ಹೇಳಲು ನಿಡಿ.64 ದಾಖಲೆ ಬಿಟ್ಟು ಬೇರೆ ದಾಖಲೆ ಇಲ್ಲ. 1987 ರಲ್ಲಿ 15 ಗುಂಟೆ ಮಾರಾಟವಾಗಿದೆ ಎನ್ನಲಾದ ಸಮಯದಲ್ಲಿ ಹಾಗೂ 1991 ರಲ್ಲಿ 2 ಗುಂಟೆ ಜಮೀನು ಮಾರಾಟವಾಗಿದೆ ಎನ್ನಲಾದ ಸಮಯದಲ್ಲಿ ವಾದಿ ಗುರುವ ಕುಟುಂಬದ ಸದಸ್ಯರಲ್ಲಿ ಪಾಲುವಾಟ್ನಿ ಆಗಿದೆ ಎಂದು ತೋರಿಸಲು ಯಾವುದೇ ಪುರಾವೆ

ಹಾಜರು ಮಾಡಿಲ್ಲ. ಪ್ರತಿವಾದಿ ನಂ.1 ರವರು ವ್ಯಸನಿ ಆಗಿದ್ದರು ಅದರ ದುರುಪಯೋಗ ಪಡೆದುಕೊಂಡು ಖರೀದಿ ಪತ್ರಗಳನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ವ್ಯಸನಿ ಆಗಿದ್ದ ಆದರೆ ಅವರ ತಾಯಿಯು ಸಹ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. 1987 ರಲ್ಲಿ ಆಗಲಿ, 1991 ರಲ್ಲಿ ಆಗಲಿ ವಾದಿ ಗುರುವ ಕುಟುಂಬದಲ್ಲಿ ಹಣದ ಅಡಚಣೆ ಇತ್ತು ಎಂದು ತೋರಿಸಲು ಏನಾದರು ಪುರಾವೆ ಹಾಜರು ಮಾಡಿದ್ದಿರಾ ಎಂದರೆ ಸಾಕ್ಷಿಯು ಅಡಚಣೆ ಇದ್ದಿದ್ದರಿಂದ ಮಾರಾಟ ಮಾಡಿದ್ದಾರೆ ಪುರಾವೆ ಇಲ್ಲ ಎಂದು ಹೇಳುತ್ತಾರೆ. ವಾದಿಯರಿಗೆ ಅವರಿಗೆ ಸೇರಿದ ಆರ್ ಎಸ್ ನಂ.121/6, 121/7 ಹಾಗೂ 121/2ಎ ಜಮೀನು ಗಳನ್ನು ಹೊಡೆದುಕೊಳ್ಳುವ ದುರುದ್ದೇಶದಿಂದ ನಾನು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಜಮೀನುಗಳ ಕಬ್ಜೆಯಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**